

■ ಭಾಸ್ಕರ್ ಎಲ್.
ಕಲೆ: ಗುರು ನಾವಳ್ಳಿ

ಮರುದಿನ ಮುಂಜಾನೆ, ಅವಳಿನ್ನೂ ಮಲಗಿರುವಂತೆಯೇ ಅವನು ಬೇಗನೆ ಎದ್ದು ತನ್ನ ನಿತ್ಯ ಕೈಂಕರ್ಯಗಳನ್ನು ಮುಗಿಸಿ, ಬಿಸಿ ಬಿಸಿ ಕಾಫಿ ಮಾಡಿಕೊಂಡು ಹೋಗಿ ಅವಳನ್ನು ಎಬ್ಬಿಸಿದ. ಬೆಡ್ ಕಾಫಿ ಪ್ರಿಯೆ, ಅವನ ಪ್ರೀತಿಯ ಕೂಗಿಗೆ ಎಚ್ಚರಗೊಂಡು ಹಾಸಿಗೆಯ ಮೃದುವಾದ ಹೊದಿಕೆ ನಡುವೆ ಎದ್ದು ಮುದುಡಿ ಕುಳಿತಳು. ಅವಳ ಕೂದಲು ಭುಜಗಳ ಮೇಲೆ ಅಲೆಗಳಂತೆ ಹರಡಿತ್ತು. ಅವನು ಕೊಟ್ಟ ಹಬೆಯಾಡುತ್ತಿದ್ದ ಸೆರಾಮಿಕ್ ಕಾಫಿ ಮಗ್ ಅವಳ ಅಂಗೈಗಳನ್ನು ಬೆಚ್ಚಗಾಗಿಸಿತು. ಅರೆನಿದ್ರೆಯಿಂದ ಆಗಷ್ಟೇ ಎದ್ದಿದ್ದ ಅವಳ ಜಿಂಕೆ ಕಣ್ಣುಗಳನ್ನು ನೋಡಿ, ಮಂಚದ ಅಂಚಿಗೆ ಒರಗಿ ನಿಂತಿದ್ದ ಅವನ ತುಟಿಗಳು ಸೌಮ್ಯವಾಗಿ ಬಿರಿದವು. ಅವಳು ತನ್ನ ಕಾಫಿಯನ್ನು ಒಂದು ಸಿಪ್ ತೆಗೆದುಕೊಂಡಳು, ಸಿಹಿಂಗರು ಅವಳ ನಾಲಿಗೆಯ ಮೇಲೆ ನರ್ತಿಸಿದಾಗ ಅವಳ ತುಟಿಗಳು ತಮಗೇ ಅರಿವಿಲ್ಲದಂತೆ ಬಿರಿದವು. ಅವನಿಗೆ ಆ ಮುಂಜಾವು ಧನ್ಯ ಎನಿಸಿತ್ತು.

‘ಗುಡ್ ಮಾರ್ನಿಂಗ್, ಬಂಗಾರಿ’ ಒಂದು ಸೋಮಾರಿ ಮುಂಜಾವಿಗೆ, ಅವನ ಧ್ವನಿ ಮಾತ್ರ ಉತ್ಸಾಹದಿಂದ ತುಂಬಿತ್ತು. ನಿದ್ರೆಯಿಂದೆದ್ದ ಬೆಚ್ಚಗಿನ ಧ್ವನಿಯೊಂದಿಗೆ, ಅವಳೂ ‘ಗುಡ್ ಮಾರ್ನಿಂಗ್ ಬಂಗಾರ, ನೀ ಯಾವಾಗ ಎದ್ದೆ?’ ಎಂದಳು, ಹೊದಿಕೆಯ ಒಳಗೆ ಬಚ್ಚಿಟ್ಟುಕೊಳ್ಳುವ ಪ್ರಯತ್ನ ಮಾಡುವಂತೆ ಅದನ್ನು ಇನ್ನಷ್ಟು ಮೇಲಕ್ಕೆ ಎಳೆದುಕೊಳ್ಳುತ್ತಾ.

‘ಆಗ಼್್ಲೇ ಎದ್ದೆ, ಆದ್ರೆ, ಯಾವ ಕಪ್ ನಿಂದು ಅಂತ ಗುರುತಿಸೋದ್ರಲ್ಲಿ ತುಂಬಾ ಬ್ಯುಸಿ ಆಗಿದ್ದೆ’ ಎಂದ ನಾಟಕೀಯವಾಗಿ.

‘ಅಕಸ್ಮಾತ್ ನಾನೇನಾದರೂ ನಿಂಗೆ ತಪ್ಪು ಕಪ್ ತಂದ್ರೆ, ನೀ ನನ್ನ ಜೀವನಪರ್ಯಂತ ಸೋಫಾಕ್ಕೆ ಗಡಿಪಾರು ಮಾಡ್ಬಿಡ್ತೀಯಾ ಅಂತ ಹೆದರಿದ್ದೆ’ ಎಂದನು, ತನ್ನ ತುಟಿಗಳನ್ನು ಕೆಳಮುಖವಾಗಿ ಬಾಗಿಸಿ ನಾಟಕೀಯ ದುಃಖ ಪ್ರದರ್ಶಿಸುತ್ತಾ. ಅವಳು ಹಲ್ಕಿರಿದು, ಮಗ್ ಅನ್ನು ಎತ್ತಿ ಅವನಿಗೆ ಗಾಳಿಯಲ್ಲೇ ಚಿಯರ್ಸ್ ಮಾಡಿ, ‘ನನ್ನ ಫೇವರಿಟ್ ಮಗ್ ಬಿಟ್ಟು ಬೇರೆ ಯಾವ್ದೆ ಮಗ್ ತಂದಿದ್ರೂ, ಗಡಿಪಾರು ಗ್ಯಾರಂಟಿ ಆಗ್ತಿತ್ತು’ ಎಂದು ಜೋರಾಗಿ ನಗಾಡಿದಳು. ಒಂದು ಕೈಲಿ ಅವನ ಕೆನ್ನೆ ಹಿಡಿದು ಗಿಂಡುತ್ತಾ.

‘ನನಗೆ ಗೊತ್ತು’, ಅವಳು ಗಿಂಡಿದ ಕೆನ್ನೆ ಉಜ್ಜಿಕೊಳ್ಳುತ್ತಾ ಅಣಕಿಸಿದ. ಅವಳನ್ನೇ ನೋಡುತ್ತಾ ಮೂತಿ ಸೊಟ್ಟ ಮಾಡಿ, ‘ಹೋದ ಶನಿವಾರದ ಕಾಫಿ ದುರಂತದ ಜೊತೆ, ನನ್ನ ಅಪಾಲಜಿ ಲಿಸ್ಟ್‌ಗೆ ಇದನ್ನೂ ಸೇರಿಸ್ತಿದ್ದೆ’ ಎಂದು ಹಲ್ಕಿರಿಯುತ್ತಾ ನಿಧಾನವಾಗಿ ಅವಳ ಕೆನ್ನೆಗೆ ಮುತ್ತಿಡಲು ಬಾಗಿದ. ಆದರೆ ಲಯ ತಪ್ಪಿ ಅವಳ ಮೂಗಿಗೆ ಮುತ್ತಿಟ್ಟ.

‘ಅಯ್ಯೋ, ಗುರಿ ತಪ್ಪಿಹೋಯ್ತು’, ಅವನ ವಿಫಲ ಯತ್ನವನ್ನು ನೋಡಿ ಗೊಳ್ಳೆಂದು ನಗುತ್ತಾ, ‘ಒಳ್ಳೆದಾಯ್ತು’ ಎಂದವಳೇ, ‘ನಿಜ, ನಿನ್ನ ವಿಸ್ಫೋಟಕ ಕಾಫಿ...!’ ಎಂದು ಹೇಳಿ ಕಾಫಿಯ ಮತ್ತೊಂದು ಸಿಪ್ ತೆಗೆದುಕೊಂಡು ‘ಒಂದು ಕಾಫಿ ಮಾಡೋಕ್ಕೆ ಹೋಗಿ, ಅಡುಗೆ ಮನೆ ಗೋಡೆ ಮೇಲೆ ರವಿವರ್ಮನ ಪೇಂಟಿಂಗ್ ಮಾಡಿದ್ಯಲ್ಲ!’ ಎಂದು ತಮಾಷೆಯಾಗಿ ಕಣ್ಣುಗಳನ್ನು ತೇಲಿಸುತ್ತಾ ಉತ್ತರಿಸಿದಳು. ತಕ್ಷಣವೇ ಸಂಶಯದ ನೋಟ ಬೀರಿ, ‘ಈ ಕಾಫಿ ಮಾಡೋ ಭರಾಟೆಲಿ ಇನ್ನೊಂದು ಪಿಕಾಸೋ ಆರ್ಟ್ ಮಾಡಿಟ್ಯಾ ಹೇಗೆ?’ ಎಂದಳು ಹುಬ್ಬುಗಂಟಿಕ್ಕಿ.

‘ಅಯ್ಯೋ ಇಲ್ವೇ ಮಾರಾಯ್ತಿ’ ಎಂದ ಹೆದರಿದವನಂತೆ ನಟಿಸುತ್ತಾ, ‘ಆದ್ರೆ, ಅದೂ ಒಂದು ಕಲೆನೇ ಚಿನ್ನಾ, ಎಲ್ರಿಗೂ ಬರಲ್ಲ,’ ದೊಡ್ಡ ಸಾಧನೆ ಮಾಡಿದವನ ಹಾಗೆ ಪೋಸು ಕೊಡುತ್ತಾ ಮತ್ತೆ ತನ್ನ ಎದೆಯನ್ನು ಉಬ್ಬಿಸಿ ಹೇಳಿದ. ‘ಡಿಮ್ಯಾಂಡ್ ಅಲ್ಲಿರೋ ಕಲೆ ನಂದು’ ಎಂದ ಹುಬ್ಬು ಕುಣಿಸುತ್ತಾ.

ಅವಳು ಮತ್ತೊಂದು ಸಿಪ್ ತೆಗೆದುಕೊಂಡು, ‘ಸೀರಿಯಸ್ಲಿ, ಕಾಫಿನ ಒಂದು ಅಬ್‌ಸ್ಟ್ರಾಕ್ಟ್ ಆರ್ಟ್ ಮಾಡೊಕ್ಕಾಗೋ ಹಾಗಿದ್ರೆ, ನೀನು ಕಾಫಿ ಲಿಯೊನಾರ್ಡೊ ಡಾ ವಿನ್ಸಿ ಆಗ್ಬಿಡ್ತಿದ್ದೆ’ ಎಂದಳು ಜೋರಾಗಿ ನಗುತ್ತಾ. ಇಬ್ಬರೂ ನಗೆಯಲ್ಲಿ ಮುಳುಗುತ್ತಿದ್ದಂತೆ, ಅವಳು ತನ್ನ ಮಗ್ ಅನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ಹಿಂದಕ್ಕೆ ಗೋಡೆಗೆ ಒರಗಿದಳು. ಇಂದೇಕೋ ಸ್ವಲ್ಪ ಸೆಳೆತ ಮತ್ತು ಸ್ವಲ್ಪ ಭಾವನಾತ್ಮಕ ದಿನದಂತೆ ಭಾಸವಾಗುತ್ತಿದ್ದರೂ, ಅವನೊಡನೆ ಹಂಚಿಕೊಳ್ಳುವ ಈ ರೀತಿಯ ಪುಟ್ಟ ಕ್ಷಣಗಳು ಎಲ್ಲವನ್ನೂ ಹಗುರಗೊಳಿಸುತ್ತಿತ್ತು.

‘ಬೇರೆ ಏನಾದರೂ ಬೇಕಾ ಚಿನ್ನ?’ ಅವನು ಕೇಳಿದ, ಅವನ ಧ್ವನಿಯಲ್ಲಿ ವಾತ್ಸಲ್ಯವಿತ್ತು, ಶಾಂತವಾಗಿತ್ತು, ಪ್ರಾಮಾಣಿಕ ಕಾಳಜಿಯಿಂದ ತುಂಬಿತ್ತು. ಅವನ ಮನಸ್ಸು ಅವಳ ದಿನವನ್ನು ಹೇಗೆ ಇನ್ನಷ್ಟು ಸೊಗಸು ಮಾಡಬಹುದು ಎಂಬ ಆಲೋಚನೆಗಳಿಂದ ತುಂಬಿತ್ತು. ಅವಳು ತಲೆ ಅಡ್ಡಡ್ಡ ಅಲ್ಲಾಡಿಸಿದಳು. ತಕ್ಷಣವೇ ಅವಳ ಮುಖದಲ್ಲಿ ನಗು ಮೂಡಿತು.

‘ನೀನು ಬೇಕು, ಬಾ ಕೂತ್ಕೋ ನಂಜೊತೆ’ ಎಂದು ಕೈಚಾಚಿ ಅವನನ್ನು ತನ್ನ ಪಕ್ಕ ಕುಳ್ಳಿರಿಸಿಕೊಂಡಳು. ಅವಳ ಮಾತುಗಳೂ ಪ್ರಾಮಾಣಿಕತೆಯಿಂದ ಕೂಡಿದ್ದವು. ಅವಳು ಮತ್ತೊಂದು ಸಿಪ್ ತೆಗೆದುಕೊಂಡಳು. ಅವನ ಕೈಯ ಕಾಫಿ ಹಿಂದಿನ ರಾತ್ರಿಯಿಂದ ಉಳಿದಿದ್ದ ಅಸ್ವಸ್ಥತೆಯ ಚಳಿಯನ್ನು ಹೊರಹಾಕಿತು, ಥಟ್ಟನೆ ಅವಳು ರಾತ್ರಿ ನೆನೆಸಿಟ್ಟ ಅಕ್ಕಿ ನೆನಪಾಗಿತ್ತು.